## ಕರ್ನಾಟಕ ಸರ್ಕಾರ
## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/01/ವೇಅಇತರೆ/ಚಿಕ ಶಾಲೆ/2017-18/ಚಿವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:05.12.2017

**ಇವರಿಗೆ:**
ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು.

ಮಾನ್ಯರೆ,

**ವಿಷಯ:** ರಾಜ್ಯದಲ್ಲಿರುವ ಚಿತ್ರಕಲಾ ಮಹಾವಿದ್ಯಾಲಯಗಳ/ಶಾಲೆಗಳ ವೇತನಾನುದಾನ ಮತ್ತು ಇತರೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಇಡಿ/41/ಯುಆರ್‌ಸಿ/2014, ದಿನಾಂಕ:10.7.2017.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಟಿಪ್ಪಣಿ ಸಂಖ್ಯೆ:ಕಾಶಿಆ/01/ಆಆಶಾ/17-18, ದಿನಾಂಕ:17.10.2017.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಪತ್ರ ಸಂಖ್ಯೆ: ಡಿಟಿಇ/40/ಚಿಕಫ/14-15/2188, ದಿನಾಂಕ:8.11.2017.
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಪತ್ರ ಸಂಖ್ಯೆ: ಡಿಟಿಇ/15/ಚಿಕಫ/14-15/2017, ದಿನಾಂಕ:20.11.2017.

*******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿರುವ 02 ಸರ್ಕಾರಿ ಕಲಾ ಶಾಲೆಗಳು, 23 ಖಾಸಗಿ ಅನುದಾನಿತ ಚಿತ್ರ ಶಾಲೆಗಳು 03 ಅಡಹಾಕ್ ಅನುದಾನಿತ ಶಾಲೆಗಳು ಹಾಗೂ 49 ಖಾಸಗಿ ಅನುದಾನ ರಹಿತ ಶಾಲೆಗಳು ಒಟ್ಟು 77 ಚಿತ್ರಕಲಾ ಶಾಲೆಗಳ ಪೈಕಿ ಸರ್ಕಾರಿ/ಖಾಸಗಿ ಅನುದಾನಿತ ಹಾಗೂ ಅಡಹಾಕ್ ಅನುದಾನಿತ ಶಾಲೆಗಳ ಶಿಕ್ಷಕ ಮತ್ತು ಆಶಿಕ ಸಿಬ್ಬಂದಿಗಳ ಆಡಳಿತ ಮತ್ತು ಆಯವ್ಯಯ ನಿರ್ವಹಣೆಯನ್ನು ಉಲ್ಲೇಖ (1)ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಿಂದ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಹಸ್ತಾಂತರವಾಗಿದ್ದು, ಉಲ್ಲೇಖ(2)ರಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಟಿಪ್ಪಣಿಯನ್ವಯ ದಿನಾಂಕ: 17.10.2017ರನ್ವಯ ಸರ್ಕಾರಿ/ಖಾಸಗಿ ಅನುದಾನಿತ ಚಿತ್ರಕಲಾ ಶಾಲೆಗಳ/ಮಹಾವಿದ್ಯಾಲಯಗಳ ಅಡ್‌ಹಾಕ್ ಅನುದಾನಿತ ಶಾಲೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರತ್ಯೇಕ ಶಾಖೆಯನ್ನು ತೆರೆದು ಸಿಬ್ಬಂದಿಗಳನ್ನು ನೇಮಿಸಿರುತ್ತಾರೆ. ಸದರಿ ಶಾಖೆಯನ್ನು ಕಾರ್ಯ ನಿರ್ವಹಣೆ ಪ್ರಾರಂಭಿಸಿ, ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಕಾಲೇಜು ಶಿಕ್ಷಣ ಇಲಾಖೆಗೆ ಸರ್ಕಾರಿ/ಖಾಸಗಿ ಅನುದಾನಿತ ಚಿತ್ರಕಲಾ ಶಾಲೆಗಳು/ಮಹಾವಿದ್ಯಾಲಯಗಳ ಅಡ್‌ಹಾಕ್ ಅನುದಾನಿತ ಶಾಲೆಗಳ ಆಯವ್ಯಯ ಆಡಳಿತ ನಿರ್ವಹಣೆಗೆ ಸಂಬಂಧಿಸಿದ ಕಡತಗಳನ್ನು ಉಲ್ಲೇಖ (3) ಮತ್ತು (4)ರಲ್ಲಿಯ ಅನುಬಂಧಗಳೊಂದಿಗೆ ಇಲಾಖೆಗೆ ಹಸ್ತಾಂತರಿಸಲಾಗಿರುತ್ತದೆ.

ಪ್ರಸ್ತುತದಲ್ಲಿ ಸರ್ಕಾರಿ/ಖಾಸಗಿ ಅನುದಾನಿತ ಚಿತ್ರಕಲಾ ಶಾಲೆಗಳು/ಮಹಾವಿದ್ಯಾಲಯಗಳು ಮತ್ತು ಅಡ್‌ಹಾಕ್ ಅನುದಾನಿತ ಶಾಲೆಗಳಿಗೆ ವೇತನ ಮತ್ತು ಇತರೆ ಅನುದಾನವನ್ನು ನೀಡಬೇಕಾಗಿರುವುದರಿಂದ ಕಾಲೇಜು ಶಿಕ್ಷಣ ಇಲಾಖೆಯಲ್ಲಿ 2017-18ನೇ ಸಾಲಿನ ಆಯವ್ಯಯ (ಬಜೆಟ್) ಸಂಬಂಧಿಸಿದ

ಅನುದಾನವನ್ನು ಒದಗಿಸಿಕೊಂಡಿರುವುದಿಲ್ಲವಾದ್ದರಿಂದ ಈ ಪೂರ್ವದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯು 20 -18ನೇ ಸಾಲಿನ ಸದರಿ ಶಾಲೆಗಳ/ಮಹಾವಿದ್ಯಾಲಯಗಳ/ಅಡ್‌ಹಾಕ್ ಅನುದಾನಿತ ಶಾಲೆಗಳ ನಿರ್ವಹಣೆ/ವೇತನಾನುದಾನ ಮತ್ತು ಇತರೆ ಅನುದಾನಗಳನ್ನು ಆಯವ್ಯಯದಲ್ಲಿ (ಬಜೆಟ್) ಒದಗಿಸಿಕೊಂಡು ಸರ್ಕಾರದಿಂದ ಅನುಮತಿ ಪಡೆದು ನಿಗಧಿತ ಲೆಕ್ಕ ಶೀರ್ಷಿಕೆಯಡಿಲ್ಲಿ ಅನುದಾನ ಮತ್ತು ಇತರೆ ಅನುದಾನ ಬಿಡುಗಡೆ ಮಾಡುತ್ತಿದ್ದು, ಸದರಿ ಸರ್ಕಾರಿ/ಖಾಸಗಿ ಅನುದಾನಿತ ಚಿತ್ರಕಲಾ ಶಾಲೆಗಳ/ಮಹಾವಿದ್ಯಾಲಯಗಳು ಮತ್ತು ಅಡ್‌ಹಾಕ್ ಅನುದಾನಿತ ಶಾಲೆಗಳಿಗೆ ಮಾರ್ಚ್ 2018ರ ಅಂತ್ಯದವರೆಗೂ ತಮ್ಮ ಹಂತದಲ್ಲೇ ನಿರ್ವಹಣೆ/ವೇತನ ಅನುದಾನ ಮತ್ತು ಇತರೆ ಅನುದಾನ ಬಿಡುಗಡೆ ಮಾಡುವಂತೆ ನಿರ್ದೇಶಿಸಲ್ಪಟ್ಟಿದೆ.

**ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.**

**ತಮ್ಮ ವಿಶ್ವಾಸಿ**

Shilpa

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

5/12/17

**ಪ್ರತಿಯನ್ನು:**

1. ಮಹಾಲೇಖಪಾಲರು (ಲೆಕ್ಕ ಪತ್ರ/ಆಡಿಟ್), ಕರ್ನಾಟಕ ವಲಯ, ಬೆಂಗಳೂರು.
2. ಸನ್ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶ, ಆರ್ಥಿಕ ಇಲಾಖೆ, ವೆಚ್ಚ-7/8, ವಿಧಾನಸೌಧ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಗುಲ್ಬರ್ಗಾ.
9. *ಅಧ್ಯಕ್ಷರು/ಕಾರ್ಯದರ್ಶಿಗಳು, ಚಿತ್ರಕಲಾ ಶಾಲೆ/ಮಹಾವಿದ್ಯಾಲಯ ಕಾಲೇಜುಗಳ ಆಡಳಿತ ಮಂಡಳಿಗಳ ಗಮನಕ್ಕಾಗಿ.
10. *ಎಲ್ಲಾ ರಾಜ್ಯದ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಚಿತ್ರಕಲಾ ಶಾಲೆ/ಮಹಾವಿದ್ಯಾಲಯ ಕಾಲೇಜುಗಳ ಪ್ರಾಂಶುಪಾಲರ ಗಮನಕ್ಕಾಗಿ.
11. ನೋಡಲ್ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕಾಲೇಜು ಶಿಕ್ಷಣ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು-ಮಾಹಿತಿಗಾಗಿ.
12. ಮಾನ್ಯ ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸದಸ್ಯರು ಹಾಗೂ ಮಾಜಿ ಶಿಕ್ಷಣ ಸಚಿವರು, ಅಡವೇಶ್ವರ ಸದನ, ವೇಮನ ರಸ್ತೆ, ಹುಬ್ಬಳ್ಳಿ-ಗಮನಕ್ಕಾಗಿ.
13. ಡಾ.ಬಿ.ಎಲ್.ಚವ್ಹಾಣ, ಕರ್ನಾಟಕ ರಾಜ್ಯ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿ ಸಂಘ (ರಿ), ಶ್ರೀ.ವಿಜಯಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ, ಚಿಟಗುಪ್ಪಿ ಆಸ್ಪತ್ರೆ ಆವರಣ, ಹುಬ್ಬಳ್ಳಿ-ಗಮನಕ್ಕಾಗಿ.
14. ರಕ್ಷಾ ಕಡತ/ಹೆಚ್ಚುವರಿ ಪ್ರತಿ/ಕಛೇರಿ ಪ್ರತಿ.

* ಕ್ರಮಾಂಕ 9 & 10 ಸರ್ಕಾರಿ/ಖಾಸಗಿ ಅನುದಾನಿತ ಚಿತ್ರಕಲಾ ಶಾಲೆ/ಮಹಾವಿದ್ಯಾಲಯಗಳು ಅಡ್‌ಹಾಕ್ ಶಾಲೆಗಳು ಹಾಗೂ ಆಡಳಿತ ಮಂಡಳಿಗಳು ಮಾರ್ಚ್ 2018ನೇ ಮಾಸಿಕದವರೆಗೂ ವೇತನಾನುದಾನ ಮತ್ತು ಇತರೆ ಅನುದಾನ ಪ್ರಸ್ತಾವನೆಗಳನ್ನು ಬೆಂಗಳೂರು ತಾಂತ್ರಿಕ ಶಿಕ್ಷಣ ನಿರ್ದೇಶಕರ ಕಛೇರಿಗೆ ಸಲ್ಲಿಸಿ ಮಂಜೂರಾತಿ ಪಡೆಯುವಂತೆ ಸೂಚಿಸಲಾಗಿದೆ.